ಕೆರೆ ಎಂದು ಇದೆ. ಆ ಕೆರೆಯಿಂದೇನಾದರೂ ಒಳ್ಳೆಯ ನೀರು ಸಿಗುತ್ತದೆಯೇ ಎಂದು ನಾವು ನೋಡುತ್ತಿದ್ದೇವೆ. ನಮ್ಮ ಮುಂದೆ ಇರತಕ್ಕಂಥ ಮಾರ್ಗಗಳು ಇವೆರಡೇ. ಇವರೆಡನ್ನೂ ಕೂಡ ನಾವು ಸಂಪೂರ್ಣವಾಗಿ ಕಾರ್ಯಗತ ಮಾಡುವಂಥ ಪ್ರಯತ್ನ ಮಾಡುತ್ತೇವೆ.

ವಿಷಯ: ಕಾರ್ಕಳ ತಾಲ್ಲೂಕಿನ ಡಿಗ್ರಿ ಪ್ರಥಮ ದರ್ಜೆ ಕಾಲೇಜ್ ಕಟ್ಟಡದ ದುರಸ್ತಿ.

304:(3070)

ಶ್ರೀ ಗೋಪಾಲ ಬಂಡಾರಿ ಹೆಚ್.(ಕಾರ್ಕಳ): ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಾರ್ಕಳ ತಾಲ್ಲೂಕಿನ ಡಿಗ್ರಿ ಪ್ರಥಮ ದರ್ಜೆ ಕಾಲೇಜಿನ ಕಟ್ಟಡವು ಮಳೆಗಾಲದಲ್ಲಿ ತುಂಬಾ ಸೋರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಇದನ್ನು ದುರಸ್ತಿ ಮಾಡಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು?

ಡಾ.ಜಿ.ಪರಮೇಶ್ವರ (ಉನ್ನತ ಶಿಕ್ಷಣ ಸಚಿವರು):

ಅ) ಬಂದಿದೆ.

ಆ) ದುರಸ್ತಿಗೊಳಿಸಲು ಸೂಕ್ತಕ್ರಮ ಕೈಗೊಳ್ಳಲಾಗುವುದು.

ಶ್ರೀ ಹೆಚ್.ಗೋಪಾಲ ಭಂಡಾರಿ: ಮಾನ್ಯ ಅಧ್ಯಕ್ಷರೇ, ಕಾರ್ಕಳ ತಾಲ್ಲೂಕಿನಲ್ಲಿ ಪ್ರಥಮದರ್ಜೆ ಕಾಲೇಜುಗಳಿಗಾಗಿ ಎರಡು ಕಟ್ಟಡಗಳಿವೆ. ಒಂದು ಕಟ್ಟಡ ಕಾರ್ಕಳದಲ್ಲಿದೆ. ಇನ್ನೊಂದು ಕಟ್ಟಡ ಕಾರ್ಕಳ ತಾಲ್ಲೂಕಿನ ಹೆಬ್ರಿಯಲ್ಲಿದೆ. ಇವರಡೂ ಹೊಸ ಕಟ್ಟಡಗಳು, ಸುಮಾರು 3-4 ವರ್ಷಗಳ ಹಿಂದೆ ಆದಂಥವು. ಕಾರ್ಕಳದಲ್ಲಿರುವಂಥ ಕಟ್ಟಡ ಕಳೆದ ವರ್ಷ ಆದದ್ದು. ಇದು ಬಹಳ ಒಳ್ಳೆಯ ರೀತಿಯಲ್ಲಿದೆ, ಅದೇನೂ ಸೋರುತ್ತಿಲ್ಲ. ಆದರೆ ಹೆಬ್ರಿಯಲ್ಲಿರತಕ್ಕಂಥ ಕಟ್ಟಡಕ್ಕೆ ಏನಾಗಿದೆ ಎಂದರೆ, ಮಳೆಗಾಲದಲ್ಲಿ ಮಳೆಯ ನೀರೆಲ್ಲಾ ಕಟ್ಟಡದ ಒಳಗೆ ಬರಕ್ಕಂಥ ಪರಿಸ್ಥಿತಿ ಇದೆ. ನನಗನ್ನಿಸುತ್ತದೆ, ಇದು ಕಟ್ಟಡದ ಕಳಪೆ ಕಾಮಗಾರಿಯಿಂದಾಗಿ ಅಲ್ಲ, ಕಟ್ಟಡದ ವಿನ್ಯಾಸದಲ್ಲಿ ಇರತಕ್ಕಂಥ ದೋಷ ಎಂದು. ಚೀಫ್ ಆರ್ಕಿಟೆಕ್ಟ್‌ನವರು ಒದಗಿಸಿದಂಥ ವಿನ್ಯಾಸದಲ್ಲಿ ಮಹಡಿಯಿಂದ ನೀರು ಕೆಳಗೆ ಹೋಗುವಂಥ ರೀತಿಯಲ್ಲಿ ಇಲ್ಲ. ಒಂದು ರೀತಿಯಲ್ಲಿ ಕಪಾಟಿನ ರೀತಿಯಲ್ಲಿ ಕಟ್ಟಡವನ್ನು ಕಟ್ಟಿದ್ದಾರೆ. ತಮಗೇ

ಗೊತ್ತಿದೆ, ತಮ್ಮ ಕೋಲಾರ ಜಿಲ್ಲೆಯಲ್ಲಿ ಒಂದು ವರ್ಷದಲ್ಲಿ ಬರುವಂಥ ಮಳೆ, ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಒಂದು ದಿನದಲ್ಲಿ ಬಂದು ಹೋಗುತ್ತದೆ. ಆ ಮಳೆಯ ನೀರು ಕಟ್ಟಡದ ಹೊರಗೆ ದೂರಕ್ಕೆ ಹೋಗುವ ಬದಲು ಕಟ್ಟಡದ ಒಳಗೆ ಹೋಗತಕ್ಕಂಥ ರೀತಿಯಲ್ಲಿ ವಿನ್ಯಾಸ ಮಾಡಿದ್ದಾರೆ. ಈ ವಿನ್ಯಾಸದ ತೊಂದರೆಯಿಂದಾಗಿ ನೀರು ಕಟ್ಟಡದ ಒಳಗೆ ಬರುವಂಥ ಪರಿಸ್ಥಿತಿಯಾಗಿದೆ. ಮಳೆಗಾಲದ 3-4 ತಿಂಗಳಲ್ಲಿ ತರಗತಿಗಳನ್ನು ನಡೆಸಲು ಆಗುತ್ತಿಲ್ಲ. ದಯವಿಟ್ಟು ಇದಕ್ಕೆ ಏನಾದರೊಂದು ಮೇಲ್ಚಾವಣಿ ಮಾಡತಕ್ಕಂಥ ವ್ಯವಸ್ಥೆಯನ್ನು ಮಾಡಬೇಕು. ಹೆಚ್ಚು ಮಳೆ ಬರುವಂಥ ಪ್ರದೇಶಗಳಾದ ದಕ್ಷಿಣ ಕನ್ನಡ, ಉಡುಪಿ, ಕರಾವಳಿ ಜಿಲ್ಲೆಗಳಲ್ಲಿ ಇನ್ನು ಮುಂದೆಯಾದರೂ ಈ ರೀತಿ ಕಟ್ಟಡಗಳಿಗೆ ವಿನ್ಯಾಸವನ್ನು ಮಾಡುವಾಗ ಬೇರೆ ರೀತಿಯ ವಿನ್ಯಾಸದ ಕಟ್ಟಡಗಳನ್ನು ಕಟ್ಟುವುದು ಸೂಕ್ತ ಎನ್ನುವ ವಿಚಾರವನ್ನು ತಮ್ಮ ಗಮನಕ್ಕೆ ತಂದು, ದಯವಿಟ್ಟು ಅದಕ್ಕೆ ಮೇಲ್ಚಾವಣಿಯನ್ನು ಮಾಡತಕ್ಕಂಥ ಒಂದು ವ್ಯವಸ್ಥೆಯನ್ನು ಮಾಡಬೇಕು ಎಂಬುದಾಗಿ ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತಿದ್ದೇನೆ. .

ಡಾ: ಜಿ.ಪರಮೇಶ್ವರ್: ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಹೇಳಿದ ಹಾಗೆ ಕಾರ್ಕಳದಲ್ಲಿರುವಂಥ ಕಟ್ಟಡವನ್ನು 1993-94ಲ್ಲಿ ಸುಮಾರು 51 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ ಕಟ್ಟಿರುವಂಥಾದ್ದು. ಒಂದು ವರ್ಷವಾದ ಮೇಲೆ ಅದು ಸೋರುವುದಕ್ಕೆ ಶುರುವಾಗಿತ್ತು. ಅದಕ್ಕೆ ಈಗಾಗಲೇ ಚುರುಕಿ ಹಾಕಿ, ಅದು ಸೋರದ ರೀತಿಯಲ್ಲಿ ಕ್ರಮ ತೆಗೆದುಕೊಂಡಿದ್ದಾರೆ. ಆದರೆ, ಮಾನ್ಯ ಸದಸ್ಯರು ಹೇಳುತ್ತಿರುವಂತೆ, ಆರ್ಕಿಟೆಕ್ಟ್ ಕೊಟ್ಟಿರತಕ್ಕಂಥ ಕಟ್ಟಡದ ವಿನ್ಯಾಸವನ್ನು ಈ ಸಂದರ್ಭದಲ್ಲಿ ಬದಲಾಯಿಸಲು ಆಗುವುದಿಲ್ಲ ಏಕೆಂದರೆ ಕಟ್ಟಡದ ಕೆಲಸ ಮುಗಿದು ಹೋಗಿದೆ. ಆದರೆ ಸೋರುವುದನ್ನು ರಿಪೇರಿ ಮಾಡಲು ಈಗಾಗಲೇ ನಾವು ಎಸ್ಟಿಮೇಟ್ ಮಾಡಿಸಿ ಕ್ರಮ ತೆಗೆದುಕೊಳ್ಳುವುದಕ್ಕೆ ಆದೇಶ ಕೊಟ್ಟಿದ್ದೇವೆ. ನಾನು ಅದನ್ನು ಖಂಡಿತವಾಗಿಯೂ ಮಾಡಿಸಿ ಕೊಡುತ್ತೇನೆ. ಜೊತೆಗೆ, ತಾವು ಹೇಳಿದ ರೀತಿಯಲ್ಲಿ ಮೇಲ್ಚಾವಣಿಯನ್ನು ಬೇರೆ ರೀತಿ ಬದಲಾವಣೆ ಮಾಡುವಂಥಾದ್ದಕ್ಕೆ ಕೂಡ ಈಗಾಗಲೇ ನಾವು ಲೋಕೋಪಯೋಗಿ ಇಲಾಖೆಗೆ ಪತ್ರ ಬರೆದಿದ್ದೇವೆ. ಅದು ಬಂದ ನಂತರ ಅದಕ್ಕೂ ಕೂಡ ಸೂಕ್ತವಾದ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಹೆಚ್.ಗೋಪಾಲ ಭಂಡಾರಿ: ಕಾರ್ಕಳದ ಕಟ್ಟಡವನ್ನು ದುರಸ್ತಿ ಮಾಡಿದರೆ ಸರಿಯಾಗುತ್ತದೆ. ಆದರೆ ನಾನು ಹೇಳುತ್ತಿರುವುದು, ವಿನ್ಯಾಸದ ದೋಷ ಇರತಕ್ಕಂಥ ಕಟ್ಟಡ ಕಾರ್ಕಳ ತಾಲ್ಲೂಕಿನ ಹೆಬ್ರಿಯಲ್ಲಿ ಇರತಕ್ಕಂಥಾದ್ದು. ಈ ವಿನ್ಯಾಸದ ದೋಷದಿಂದ ನೀರು ಒಳಗೆ ಬರುತ್ತಿದೆ. ಈ ಸಮಸ್ಯೆಯನ್ನು ಪರಿಹಾರ ಮಾಡಬೇಕು ಎಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಜಿ.ಪರಮೇಶ್ವರ್: ಆಗಬಹುದು.